

# ಹಸಿರ ಹಾದಿಯ ಪಯಣ

■ ಚಿತ್ರ –ಲೇಖನ: **ಎಚ್.ಕೆ.ಶರತ್**



ಮಂಜಿನೊಂದಿಗೆ ಮುಂಜಾನೆ ಮಾತಿಗಿಳಿದಿತ್ತು. ದಿನವೊಂದು ಮುಂಜಾನೆಯ ಮುಖವಾಡ ಕಳಚಿ ಮಧ್ಯಾಹ್ನವಾಗುವ ಉಮೇದಿನಲ್ಲಿತ್ತು. ದಿನದ ಮನದಾಳ ಹೊಕ್ಕಂತೆ ವರ್ತಿಸಲಾರಂಭಿಸಿದ ಸೂರ್ಯ ಹಸಿರು ಗುಡ್ಡಗಳ ಅಸ್ತಿತ್ವ ಮರೆಮಾಚಿದ್ದ ಮಂಜಿನ ಸೆರಗು ಸರಿಸಲಾರಂಭಿಸಿದ. ಅದುವರೆಗೂ ಕೇವಲ ಮಂಜಾಗಿ ಮಾತ್ರ ನಮ್ಮೆದುರು ನಿಂತಿದ್ದ ನಿಸರ್ಗದ ಚೆಲುವು, ಸೂರ್ಯನ ಆರ್ಭಟ ಹೆಚ್ಚುತ್ತಾ ಹೋದಂತೆಲ್ಲ ಹಸಿರಾಗಿ ಉಸಿರಿಗೆ ಸೋಕಲಾರಂಭಿಸಿತು.

ಮುಳ್ಳಯ್ಯನಗಿರಿ, ಕೆಮ್ಮಣ್ಣುಗುಂಡಿ ತೋರಿಸುತ್ತೇನೆಂದು ಪುಸಲಾಯಿಸಿ ನಮ್ಮನ್ನು ತನ್ನ ಕಾರಿನೊಳಗೆ ತುಂಬಿಕೊಂಡು ಚಿಕ್ಕಮಗಳೂರು ಹಾದಿ ಹಿಡಿದಿದ್ದ ಸ್ನೇಹಿತ, ಮುಳ್ಳಯ್ಯನಗಿರಿಯ ಬುಡ ಹೊಕ್ಕು ಆನಂತರ ಕೆಮ್ಮಣ್ಣುಗುಂಡಿ ಎಡೆಗೆ ಪಥ ಬದಲಿಸಿದಾಗಲೇ ನಮ್ಮೊಳಗೆ ತುಸು ಅಸಹನೆ ಕುಡಿಯೊಡೆಯಲಾರಂಭಿಸಿತ್ತು. ಆದರೂ ತೋರಗೊಡದೆ, ರಸ್ತೆಗೆ ಒರಗಿಕೊಂಡಿರುವ ಬದುಕಿನ ಚಿತ್ರಗಳನ್ನು ಕಣ್ಣಂಚಿನಲ್ಲಿ ದಾಖಲಿಸಿಕೊಳ್ಳುತ್ತಿದ್ದೆವು.

ಮೊದಲೆಲ್ಲ ಅಷ್ಟೇನೂ ಮನುಷ್ಯರ ಆರ್ಭಟಕ್ಕೆ ತೆರೆದುಕೊಳ್ಳದೆ ತೆಪ್ಪಗಿದ್ದ ಮುಳ್ಳಯ್ಯನಗಿರಿಯಲ್ಲಿ ಇದೀಗ ಮನುಷ್ಯರು ಮತ್ತವರ ಸೆಲ್ಫಿಗಳೇ ಸದ್ದು ಮಾಡುತ್ತಿರುವ ವಿದ್ಯಮಾನದಿಂದ ಬೇಸರಗೊಂಡಿದ್ದ ಸ್ನೇಹಿತ, ಎಲ್ಲರ ಮೊಬೈಲಿನೊಳಗೂ ಸೆಲ್ಫಿಯ ಬ್ಯಾಕ್‌ಗ್ರೌಂಡ್ ಆಗಿ ಜಮೆಯಾಗುತ್ತಿರುವ ಮುಳ್ಳಯ್ಯನಗಿರಿಯನ್ನು ಅದರ ಪಾಡಿಗಿರಲು ಬಿಟ್ಟು ಕೆಮ್ಮಣ್ಣುಗುಂಡಿಯೆಡೆಗೆ ಕಾರು ಹೊರಳಿಸಿದ. ತಾನು ಇದುವರೆಗೂ ನೀವು ನೋಡಿರದ ಸುಂದರ ಸ್ಥಳವೊಂದರೆದುರು ನಿಮ್ಮನ್ನು ನಿಲ್ಲಿಸುತ್ತೇನೆಂಬ ಭರವಸೆ ನೀಡಿದ.

ರಸ್ತೆಯ ಅಸ್ತಿತ್ವವನ್ನೇ ನುಂಗಿಕೊಂಡಂತಿದ್ದ ಹೊಂಡಗಳಲ್ಲಿನ ಬಗ್ಗಡ ಮತ್ತು ಬೆಟ್ಟದ ಮೇಲಿಂದ ಹಾಲ್ನೊರೆಯಂತೆ ಜಿನುಗುತ್ತಿದ್ದ ತಿಳಿ ನೀರು ಹಾದಿಯುದ್ದಕ್ಕೂ ನಮ್ಮನ್ನು ಸ್ವಾಗತಿಸಿ ಬೀಳ್ಕೊಡುತ್ತಿದ್ದವು. ಆಗಾಗ ಎದುರುಗೊಳ್ಳುತ್ತಿದ್ದ ಪುಟ್ಟ ಜಲಪಾತಗಳಂತಹ ಅನಾಮಿಕ ಝರಿಗಳು ಗಮನ ಸೆಳೆದವು!

ಕೊನೆಗೂ ಪ್ರಶಾಂತ ತಾಣವೊಂದರೆದುರು ನಾವಿದ್ದ ಕಾರು ನಿಂತಿತು. ಆವರಿಸಿದ್ದ ದಟ್ಟ ಮಂಜಿನೆದುರು ತನ್ನದೇನೂ ನಡೆಯಲಾರದೆಂದು ಕಣ್ಣು ತೆಪ್ಪಗಾಗುವ ಹೊತ್ತಿಗಾಗಲೇ ಸೂರ್ಯ ನಮ್ಮ ನೆರವಿಗೆ ಧಾವಿಸಿದ. ಆನಂತರ ನಮ್ಮೆಲ್ಲರ ಕಣ್ಣು ಕ್ಲಿಕ್ಕಿಸಿಕೊಂಡ ದೃಶ್ಯಗಳೇ ಇಲ್ಲಿ ಫೋಟೋಗಳಾಗಿವೆ.

ಅಂದ ಹಾಗೆ ಹೆಸರಿರದ ಅಥವಾ ನಮಗೆ ತಿಳಿಯದಿರುವ ಹೆಸರಿರುವ ಆ ಸ್ಥಳಕ್ಕೆ ನಮ್ಮ ಅನುಕೂಲಕ್ಕಾದರೂ ಒಂದು ಹೆಸರಿರಲೆಂದು 'ಬನವಾಸೆ ಸ್ಪಾಟ್' ಅಂತ ನಾಮಕರಣ ಮಾಡಿದೆವು. ನಮ್ಮನ್ನೆಲ್ಲ ಅಲ್ಲಿಗೆ ಕರೆದುಕೊಂಡು ಹೋಗಿದ್ದ ಗೆಳೆಯನ ಹೆಸರಿನೊಂದಿಗೆ ತಗಲು ಹಾಕಿಕೊಂಡಿರುವ ಊರೊಂದರ ಹೆಸರದು.

ಅಷ್ಟೇನು ಮನುಷ್ಯರ ಹಾವಳಿಗೆ ತುತ್ತಾಗದ ಈ ತಾಣವನ್ನೂ ತನ್ನ ಪಾಡಿಗೆ ತಾನಿರಲು ಸುಮ್ಮನೆ ಬಿಡಬಾರದೆಂದು ಬಯಸುವ ನಮ್ಮಂತಹವರೇ ನೀವೂ ಆಗಿದ್ದರೆ, ಬಾಬಾಬುಡನ್‌ಗಿರಿಯಿಂದ ಕೆಮ್ಮಣ್ಣುಗುಂಡಿಗೆ ಕರೆದೊಯ್ಯುವ ರಸ್ತೆಯಲ್ಲಿ ಸಾಗಿದರೆ ಭದ್ರಾ ರಕ್ಷಿತಾರಣ್ಯದ ಒಡಲು ತೆರೆದುಕೊಳ್ಳುತ್ತದೆ. ಆನಂತರ ಇನ್ನೇನು ಕೆಮ್ಮಣ್ಣುಗುಂಡಿ ಕೇವಲ 11 ಕಿ.ಮೀ. ಇದೆ ಎಂದುಕೊಳ್ಳುವ ಹೊತ್ತಿಗೆ ಈ ಸ್ಥಳ ನಿಮ್ಮ ಕಣ್ಣೆದುರು ಹಾಜರಿರುತ್ತದೆ. ●